ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/58/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| **ಶ್ರೀ.ಮಾದನೂರ ಚಂದ್ರಮ್ಮ ಗಂಡ ಲೇಟ್ ಹೊನ್ನಪ್ಪ** | **ಎಂ ಬೀರಪ್ಪ ತಂದೆ ದೊಡ್ಡ ವೀರಪ್ಪ ,ತಿಪ್ಪಾಪುರ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| 60 ಹಾಳ್ ತಿಮಲಾಪುರ | 32/A | 5.75 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀಮತಿ ಮಾದನೂರ ಚಂದ್ರಮ್ಮ ಗಂಡ ಲೇಟ್ ಹೊನ್ನಪ್ಪ ಇವರು ದಿನಾಂಕ 18/12/2014 ರಂದು ಅರ್ಜಿ ಸಲ್ಲಿಸಿ ಮೂಲ ಪಟ್ಟಾದಾರಳಾದ ಶ್ರೀಮತಿ ತಿಪ್ಪಾಪುರ ಮಾಳವ್ವ ಹಾಗು ಆಕೆಯ ಗಂಡ ಗುಡ್ಡಪ್ಪ ಇವರು ಮರಣ ಹೊಂದಿದ ಕಾರಣ ಮತ್ತು ಅವರಿಗೆ ಸಂತಾನವಿಲ್ಲದ ಕಾರಣ ತನ್ನ ಹೆಸರಿಗೆ ಪೌತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ವಂಶವೃಕ್ಷ ಹಾಗು ಮರಣ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಎಂ ಆರ್ ಸಂಖ್ಯೆ ಹೆಚ್33/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀ ಎಂ ಬೀರಪ್ಪ ತಂದೆ ದೊಡ್ಡ ವೀರಪ್ಪ ,ತಿಪ್ಪಾಪುರ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗು ಪ್ರತಿವಾದಿ ಪರ ನ್ಯಾಯವಾದಿಗಳಿಗೆ ಅವಕಾಶ ನೀಡಿ ದಿನಾಂಕ 16/04/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ 27/08/2015 ರಂದು ಅಂತಿಮಗೊಳಿಸಲಾಯಿತು.

ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ.ಪ್ರತಿವಾದಿಗಳ ಪರವಾಗಿ ಅವರ ವಕೀಲರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ದಾವಾ ಜಮೀನನ್ನು ಗುಡ್ಡಪ್ಪ ತಂದೆ ವೀರಪ್ಪ ಇವರು 1925 ರಲ್ಲಿ ಖರೀದಿಸಿದ್ದು ಸದರಿ ಜಮೀನು ತಮ್ಮ ಅವಿಭಕ್ತ ಕುಟುಂಬದ ಆಸ್ತಿಯಾಗಿರುತ್ತೆಂದು ಮತ್ತು ಹಾಲಿ ಪಟ್ಟಾದಾರರು ಯಾವುದೇ ನೊಂದಾಯಿತ ದಾಖಲೆಗಳಿಲ್ಲದೇ ಪಹಣಿಯಲ್ಲಿ ತಪ್ಪಾಗಿ ನಮೂದಾಗಿರುವುದಾಗಿ ತಿಳಿಸಿ ದಾವಾ ಜಮೀನನ್ನು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರತಿವಾದಿ ಹೇಳಿಕೆಯನ್ನು ಪರಿಗಣಿಸಿ ದಾವಾ ಜಮೀನಿಗೆ ಸಂಬಂದಿಸಿದ ವಿವಾದವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ವಾದಿ ಮತ್ತು ಪ್ರತಿವಾದಿಗಳು ನೀಡಿದ ದಾಖಲೆಗಳನ್ವಯ 60 ಹಾಳ್ ತಿಮಲಾಪುರ ಗ್ರಾಮದ ದಾವಾ ಜಮೀನಿನ ಬಗ್ಗೆ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| 60 ಹಾಳ್ ತಿಮಲಾಪುರ | 32/A | 5.75 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.